# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 17-04-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ಪ್ರಸನ್ನಕುಮಾರ್ ಪ್ರವೀಣ್ ಎ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀಮತಿ ನಫೀಜಾ ರವರು, ಸಹಾಯಕ ಆಯುಕ್ತರು (ಆಡಳಿತ) ಹಾಗೂ ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳು, ಪೂರ್ವ ವಲಯ
3. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
4. ಡಾ॥ ಶಾಹೀನಾ, ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ವಾರ್ಡ್ ಸಂಖ್ಯೆ.29.
5. ಶ್ರೀ.ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಸದಸ್ಯರು,
6. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ),
7. ಶ್ರೀ ಪ್ರಸನ್ನ, ಸದಸ್ಯರು, ಹೆಚ್.ಬಿ.ಆರ್ ಬಡಾವಣೆ ಅಸೋಸಿಯೇಷನ್(ರಿ)
8. ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್,
9. ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್(ರಿ)

**ಹಾಜರಿದ್ದ ಅಧಿಕಾರಿಗಳು**

1. ಶ್ರೀ.ದವಲ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ),
2. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
3. ಮಾರ್ಷಲ್, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
4. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ,
5. ಸಬ್ ಇನ್ಸ್‌ಪೆಕ್ಟರ್ (ಸಂಚಾರ) ಬಾಣಸವಾಡಿ ಪೊಲೀಸ್ ಠಾಣೆ,
6. ಶ್ರೀ ಪುಟ್ಟಸ್ವಾಮಿ, ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ.
7. ಶ್ರೀಮತಿ ಗೀತಾ, ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ.
8. ಶ್ರೀಮತಿ ರಾಜಶ್ರೀ, ಕಲ್ಯಾಣ ಇಲಾಖೆ,

ಈ ಸಭೆಗೆ ಹಾಜರಾಗಿದ್ದ ಮೇಲ್ಕಂಡ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ಪ್ರಸನ್ನ, ಸದಸ್ಯರು, ಹೆಚ್.ಬಿ.ಆರ್ ಬಡಾವಣೆ ಅಸೋಸಿಯೇಷನ್(ರಿ) ರವರು ಮಾತನಾಡಿ,** ರಾಮ ದೇವಸ್ಥಾನ ರಸ್ತೆ, ವಾರ್ಡ್ ಸಂಖ್ಯೆ.29 ಹಾಗೂ ವಾರ್ಡ್ ಸಂಖ್ಯೆ.24ಕ್ಕೆ ಒಳಪಟ್ಟಿದ್ದು, ವಾರ್ಡ್ ಸಂಖ್ಯೆ.29ಕ್ಕೆ ಒಳಪಡುವ ರಸ್ತೆ ಮತ್ತು ಪಾದಾಚಾರಿ ಮಾರ್ಗದ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿರುತ್ತಾರೆ. ವಾರ್ಡ್ ಸಂಖ್ಯೆ.24ರ ಪಾದಾಚಾರಿ ಮಾರ್ಗವನ್ನು ಕೈಗೊಂಡಿರುವುದಿಲ್ಲ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಈ ಬಗ್ಗೆ ಮಾತನಾಡಿ, ವಾರ್ಡ್ ಸಂಖ್ಯೆ.29ರ ಪ್ರದೇಶದಲ್ಲಿ ಬಹುತೇಕ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ವಾರ್ಡ್ ಸಂಖ್ಯೆ.29ರಲ್ಲಿ ರಸ್ತೆ ಕತ್ತರಿಸಿದ



Scanned with CamScanner

ಭಾಗಗಳಿಗೆ ಹಾಗೂ ಕೆಲವು ರಸ್ತೆಯ ಗುಂಡಿಗಳ ಮುಚ್ಚುವ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ ಎಂದು ಸಭೆಗೆ ತಿಳಿಸಿದರು.

2) **ಶ್ರೀಮತಿ ನಫೀಜಾ ರವರು, ಸಹಾಯಕ ಆಯುಕ್ತರು (ಆಡಳಿತ) ಹಾಗೂ ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳು, ಪೂರ್ವ ವಲಯ ರವರು ಮಾತನಾಡಿ,** ಕೋವಿಡ್ 19 ನಿಯಂತ್ರಣಕ್ಕೆ ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ನಿರೀಕ್ಷಕರು ಮಾತನಾಡಿ, ಜನನಿಬಿಡ ಪ್ರದೇಶಗಳಾದ ವಾಣಿಜ್ಯ ಸಮುಚ್ಚಯಗಳು, ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್, ಸಮುದಾಯ ಭವನಗಳಿಗೆ ನಮ್ಮ ಆರೋಗ್ಯ ಸಿಬ್ಬಂದಿ ಭೇಟಿ ನೀಡಿ, ಸ್ಯಾನಿಟೈಸೇಷನ್ ಮಾಡುವುದು, ಮಾಸ್ಕ್ ಧರಿಸಲು ಹಾಗೂ ಸಾಮಾಜಿಕ ಅಂತರವನ್ನು ನಿರ್ವಹಿಸಲು ಧ್ವನಿವರ್ಧಕ ಇರುವ ಆಟೋ ಮುಖಾಂತರ ಜನಜಾಗೃತಿ ಮೂಡಿಸುವ ಕಾರ್ಯವನ್ನು ಸತತವಾಗಿ ಮುಂದುವರೆಸಿಕೊಂಡು ಬಂದಿರುತ್ತೇವೆ ಎಂದು ಸಭಾ ಗಮನಕ್ಕೆ ತಂದಾಗ, ಮಾನ್ಯ ಸಹಾಯಕ ಆಯುಕ್ತರು (ಆಡಳಿತ) ರವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕೋವಿಡ್ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಗುಂಪು ಸೇರುವ ಪ್ರದೇಶಗಳಲ್ಲಿ ಆರೋಗ್ಯ ಸಿಬ್ಬಂದಿ ಮಾರ್ಷಲ್‌ಗಳೊಂದಿಗೆ ಹೆಚ್ಚಿನ ನಿಗಾ ವಹಿಸಿ, ಮಾಸ್ಕ್ ಧರಿಸದವರಿಗೆ ದಂಡ ವಿಧಿಸುವುದು ಹಾಗು ಗುಂಪು ಸೇರದೇ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ತಿಳುವಳಿಕೆ ನೀಡುವುದು. ಪ್ರಕರಣಗಳು ಹೆಚ್ಚಾಗಿರುವ ಪ್ರದೇಶಗಳಲ್ಲಿ ಹೆಚ್ಚು ಸ್ಯಾನಿಟೈಸೇಷನ್ ಮಾಡಲು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ನಿರೀಕ್ಷಕರಿಗೆ ಆದೇಶಿಸಿದರು.

3) **ಶ್ರೀಮತಿ ನಫೀಜಾ ರವರು, ಸಹಾಯಕ ಆಯುಕ್ತರು (ಆಡಳಿತ) ಹಾಗೂ ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳು, ಪೂರ್ವ ವಲಯ ರವರು ಮಾತನಾಡಿ,** ಮಾರ್ಷಲ್‌ಗಳ ಕಾರ್ಯನಿರ್ವಹಣೆ ಬಗ್ಗೆ ಪ್ರಸ್ತಾಪಿಸಿದಾಗ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಂಖ್ಯೆ.29ರ ಮಾರ್ಷಲ್ ರವರು ಮಾತನಾಡಿ, ಪ್ರತಿದಿನ ನಿಷೇಧಿತ ಸ್ಥಳಗಳಲ್ಲಿ ಕಸವನ್ನು ಎಸೆಯುವವರನ್ನು ಗುರುತಿಸಿ, ಅಂತವರಿಗೆ ದಂಡವನ್ನು ವಿಧಿಸುವುದು ಮತ್ತು ರಸ್ತೆಗಳಲ್ಲಿ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಮಾಸ್ಕ್ ಧರಿಸದೇ ಓಡಾಡುವವರನ್ನು ತಡೆದು ದಂಡ ವಿಧಿಸಲಾಗುತ್ತಿರುತ್ತದೆ. ಈ ರೀತಿ ದಂಡ ವಿಧಿಸಿ ಸಂಗ್ರಹಿಸಿರುವ ಮೊತ್ತ ರೂ.13,150/– ಗಳಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಮಾನ್ಯ ಸಹಾಯಕ ಆಯುಕ್ತರು (ಆಡಳಿತ) ರವರು ಮಾತನಾಡಿ, ಮಾರ್ಷಲ್‌ಗಳು ವಾರ್ಡ್ ಪ್ರದೇಶದಲ್ಲಿ ಹೆಚ್ಚು ನಿಗಾ ವಹಿಸಿ, ಇನ್ನಷ್ಟು ದಂಡವನ್ನು ಸಂಗ್ರಹ ಮಾಡಲು ಆದೇಶಿಸಿದರು.

4) **ಶ್ರೀ ಪಿಳ್ಳಪ್ಪ, ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ,** ರಾಮಯ್ಯ ಬಡಾವಣೆಯಲ್ಲಿ ಕಾವೇರಿ ನೀರು ಸಮರ್ಪಕವಾಗಿ ಸರಬರಾಜು ಆಗುತ್ತಿದ್ದು, ರಾಮಯ್ಯ ಬಡಾವಣೆ 2ನೇ ಜಿ ಅಡ್ಡರಸ್ತೆಯಲ್ಲಿ ಕಲುಷಿತ ನೀರು ಸರಬರಾಜು ಆಗುತ್ತಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ ಬಿಡಬ್ಲ್ಯೂಎಸ್‌ಎಸ್‌ಬಿ ಅಭಿಯಂತರರು ಕೂಡಲೇ ಸ್ಥಳ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

Scanned with CamScanner

5) **ಶ್ರೀಮತಿ ನಫೀಜಾ ರವರು, ಸಹಾಯಕ ಆಯುಕ್ತರು (ಆಡಳಿತ) ಹಾಗೂ ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳು, ಪೂರ್ವ ವಲಯ ರವರು ಮಾತನಾಡಿ,** ವಾರ್ಡ್ ಪ್ರದೇಶದಲ್ಲಿ ಸಂಚರಿಸಿ ಸಂಗ್ರಹಿಸುವ ಆಟೋ ಟಿಪ್ಪರ್‌ಗಳಿಗೆ ಒಣಕಸ ಹಾಗೂ ಹಸಿ ಕಸ ಸರಗ್ರಹಿಸುವ ಆಟೋಗಳಿಗೆ ಬಣ್ಣ ಬದಲಾಯಿಸಲು ಅಂದರೆ ಹಸಿ ಕಸ ಸಂಗ್ರಹಿಸುವ ಆಟೋಗಳಿಗೆ ಮತ್ತು ಒಣ ಕಸ ಸಂಗ್ರಹಿಸುವ ಆಟೋಗಳಿಗೆ ಬೇರೆ ಬೇರೆ ಬಣ್ಣಗಳನ್ನು ಬಳಿಯಲು ಸಲಹೆ ನೀಡಿದಾಗ, ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ನಿರೀಕ್ಷಕರು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ, ಸಭೆಗೆ ತಿಳಿಸಿದರು ಮತ್ತು ಹೆಣ್ಣೂರು ಮುಖ್ಯರಸ್ತೆ, 12ನೇ ಅಡ್ಡರಸ್ತೆಯಲ್ಲಿ ಖಾಲಿ ನಿವೇಶನದಲ್ಲಿ ಸಾರ್ವಜನಿಕರು ಕಸವನ್ನು ಎಸೆದು, ಬ್ಲಾಕ್‌ಸ್ಪಾಟ್ ಆಗಿ ಮಾರ್ಪಾಡಿಸಿರುತ್ತಾರೆ. ಈ ಬಗ್ಗೆ ಪ್ರಸ್ತಾಪಿಸಿದಾಗ, ಹಿರಿಯ ಆರೋಗ್ಯ ನಿರೀಕ್ಷಕರು ಮಾತನಾಡಿ, ಸದರಿ ಸ್ಥಳವು ಖಾಸಗೀ ಸ್ಥಳವಾಗಿದ್ದು, ಈ ಬಗ್ಗೆ ಕಸ ಹಾಕದೇ ತಡೆಯಲು ಎತ್ತರಕ್ಕೆ ಮೆಷ್ ಕಾಂಪೌಂಡನ್ನು ನಿರ್ಮಿಸಲಾಗಿರುತ್ತದೆ ಆದಾಗ್ಯೂ ಸಾರ್ವಜನಿಕರು ಕಸವನ್ನು ಮೇಲಕ್ಕೆ ಎಸೆಯುತ್ತಾರೆ. ಆದ್ದರಿಂದ ಇನ್ನು ಮುಂದೆ ಸದರಿ ಸ್ಥಳದಲ್ಲಿ ಸಾರ್ವಜನಿಕರು ಕಸ ಹಾಕದಂತೆ ಮಾರ್ಷಲ್‌ಗಳನ್ನು ನಿಯೋಜಿಸಿ, ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಹಾಯಕ ಆಯುಕ್ತರು (ಆಡಳಿತ) ರವರಿಗೆ ವಿವರಿಸಿದರು.

6) **ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್(ರಿ) ರವರು ಮಾತನಾಡಿ,** ವಾರ್ಡ್ ಪ್ರದೇಶದಲ್ಲಿ ನಿರಂತರವಾಗಿ ವಿದ್ಯುತ್ ಸರಬರಾಜು ಕಡಿತಗೊಳಿಸಲಾಗುತ್ತಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಚರ್ಚಿಸಲಾಗಿ, ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಟ್ರಾನ್ಸ್‌ಫರ್‌ಮರ್‌ಗಳ ದುರಸ್ಥಿ ಕಾರ್ಯವಿದ್ದಾಗ ವಿದ್ಯುತ್ ಸರಬರಾಜು ಕಡಿತಗೊಳಿಸಲಾಗುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಹಾಜರಿದ್ದ ಎಲ್ಲಾ ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ಸದಸ್ಯರುಗಳು ವಿದ್ಯುತ್ ಕಡಿತಗೊಳಿಸುವ ಮುನ್ನ ಪೂರ್ವ ಮುನ್ಸೂಚನೆ ನೀಡಲು ಸಭೆಗೆ ತಿಳಿಸಿದಾಗ, ಇನ್ನು ಮುಂದೆ ಅಸೋಸಿಯೇಷನ್ ಗ್ರೂಪ್‌ಗಳಿಗೆ ಮಾಹಿತಿ ತಿಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

7) **ಡಾ॥ ಶಾಹೀನಾ, ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ವಾರ್ಡ್ ಸಂಖ್ಯೆ.29, ರವರು ಮಾತನಾಡಿ,** ಪ್ರಸ್ತುತ ವಾರ್ಡ್ ಪ್ರದೇಶದಲ್ಲಿ ಕೋವಿಡ್-19 ನಿಯಂತ್ರಣದಲ್ಲಿದ್ದು, ಒಟ್ಟು 813 ಪ್ರಕರಣಗಳು ಇದ್ದು, 486 ಹೋಮ್ ಐಸೋಲೇಷನ್, 183 ಜನ ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತಾರೆ, 22 ಜನ ಮರಣ ಹೊಂದಿರುತ್ತಾರೆ, ಸಕ್ರಿಯ ಪ್ರಕರಣಗಳು 104 ಆಗಿರುತ್ತವೆ. ಇದರಲ್ಲಿ 04 ಸೋಂಕಿತರು ಮಾತ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಬಾಕಿ 100 ಜನ ಹೋಮ್ ಐಸೋಲೇಷನ್‌ನಲ್ಲಿ ಇರುತ್ತಾರೆ. ಪ್ರತಿ ದಿನ 12-13 ಸೋಂಕು ದೃಢಪಡಲಾಗುತ್ತಿದೆ. ವಾರ್ಡ್ ಪ್ರದೇಶದಲ್ಲಿ 31228 ಜನಕ್ಕೆ ಆರ್.ಟಿ.ಪಿ.ಸಿ.ಆರ್ ತಪಾಸಣೆ ಮಾಡಲಾಗಿರುತ್ತದೆ. 7130 ಜನಕ್ಕೆ ರ್‍ಯಾಪಿಡ್ ತಪಾಸಣೆ ಕೈಗೊಳ್ಳಲಾಗಿರುತ್ತದೆ. ಆಸ್ಪತ್ರೆಯಲ್ಲಿ ನಿರಂತರವಾಗಿ ವ್ಯಾಕ್ಸಿನೇಷನ್



Scanned with CamScanner

ನೀಡಲಾಗುತ್ತಿದೆ ಮತ್ತು ಹಲವು ಬಡಾವಣೆಗಳಲ್ಲಿ ಹೆಲ್ತ್ ಶಿಬಿರಗಳನ್ನು ಮಾಡಿ, ವ್ಯಾಕ್ಸಿನೇಷನ್ ನೀಡುವುದು ಮತ್ತು ಕೋವಿಡ್ 19 ತಪಾಸಣಾ ಕಾರ್ಯ ತೀವ್ರಗತಿಯಲ್ಲಿ ಸಾಗುತ್ತಿರುತ್ತದೆ ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

Prasanna Kumar A

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

***ಪ್ರತಿಯನ್ನು***

1) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.
5) ಕಛೇರಿ ಕಡತಕ್ಕೆ.

Scanned with CamScanner